RNU AIR DHARWAD

DECEMBER 23, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

**<><><>**

ಇಂದು ರಾಷ್ಟ್ರೀಯ, ರೈತ ದಿನಾಚರಣೆ. ರೈತರ ಕಲ್ಯಾಣ ಹಾಗೂ ಗ್ರಾಮೀಣ ಸಮುದಾಯಗಳ ಅಭಿವೃದ್ಧಿಗೆ ಶ್ರಮಿಸಿದ, ಭಾರತದ ಐದನೇ ಪ್ರಧಾನಮಂತ್ರಿ, ದಿವಂಗತ ಚೌಧರಿ ಚರಣ್‌ಸಿಂಗ್ ಅವರ, ಜನ್ಮದಿನವಿಂದು. ನಾಡಿನಾದ್ಯಂತ, ಹಲವು ಅರ್ಥಪೂರ್ಣ ಕಾರ್ಯಕ್ರಮಗಳ ಮೂಲಕ, ಅನ್ನದಾತನನ್ನು ಗೌರವಿಸಲಾಗುತ್ತಿದೆ.

<><><>

"ತುತ್ತು ಅನ್ನ ಉಣ್ಣುವ ಮೊದಲು, ರೈತನನ್ನು ನೆನೆ" ಎನ್ನುವ ಮಾತಿನಂತೆ, ನಾವು ಉಣ್ಣುವ ಪ್ರತಿ ಅಗುಳಿನಲ್ಲೂ, ರೈತರ ಶ್ರಮ ಅಡಗಿದೆ. ದುಡಿಮೆಯೇ ದೇವರೆನ್ನುತ್ತ, ದೇಶದ ಪ್ರಗತಿಗೆ ಶ್ರಮಿಸುತ್ತಿರುವ, ಅನ್ನದಾತರ ಋಣ ತೀರಿಸಲಾಗದು ಎಂದು ರಾಜ್ಯ ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಹಾಗೂ ಹುಬ್ಬಳ್ಳಿ ಪೂರ್ವ ಕ್ಷೇತ್ರದ ಶಾಸಕ, ಪ್ರಸಾದ ಅಬ್ಬಯ್ಯ, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ. ನಾಡಿನ ಅನ್ನದಾತರಿಗೆ, ರಾಷ್ಟ್ರೀಯ ರೈತ ದಿನಾಚರಣೆ ಶುಭಾಶಯ ಕೋರಿದ್ದಾರೆ.

<><><>

ವಿಕಸಿತ ಭಾರತ – 2047, 'ಜಿ ರಾಮ್ ಜಿ' ದೇಶ ಕಟ್ಟುವ ಕಾಯಕ, ಎಂದು ರಾಜ್ಯಸಭೆ ಸಂಸದ, ಬೆಳಗಾವಿಯ ಈರಣ್ಣ ಕಡಾಡಿ ಹೇಳಿದ್ದಾರೆ. ಹಿಂದೆ, ಮಳೆ ಬಂದರೆ, ಕೊಚ್ಚಿ ಹೋಗುವ ಮಣ್ಣು ಅಗೆಯುವ ಕೂಲಿ ಕೆಲಸ ನೀಡಲಾಗುತ್ತಿತ್ತು. ಈಗ, ರಸ್ತೆ, ಚೆಕ್ ಡ್ಯಾಂ ನಂತಹ ಶಾಶ್ವತ ಆಸ್ತಿಗಳನ್ನು ನಿರ್ಮಿಸಿ, ವಿಕಸಿತ ಭಾರತದ, ಹಳ್ಳಿಗಳ ಸುಸ್ಥಿರ ಅಭಿವೃದ್ಧಿಗೆ, ಹೊಸ ಅಲೆ ಸೃಷ್ಟಿಸಲಾಗುತ್ತಿದೆ ಎಂದಿದ್ದಾರೆ.

<><><>

ಕೇಂದ್ರ ಸರ್ಕಾರ, ಮಹಾತ್ಮ ಗಾಂಧಿ ನರೇಗಾ ಯೋಜನೆಗೆ ಬದಲಾಗಿ, ವಿಕಸಿತ ಭಾರತ 2047, ಜಿ ರಾಮ್ ಜಿ ಯೋಜನೆ ಎಂದು, ಮರು ನಾಮಕರಣ ಮಾಡಿದೆ. ಕಟಾವು, ಬಿತ್ತನೆ ಇತ್ಯಾದಿ ಕೃಷಿ ಕೆಲಸಗಳನ್ನು, ಯೋಜನೆ ವ್ಯಾಪ್ತಿಗೆ ತಂದಿದ್ದು, ರೈತಾಪಿ ವರ್ಗಕ್ಕೆ ಅನುಕೂಲವಾಗಿದೆ ಎಂದು, ಉತ್ತರಕನ್ನಡ ಜಿಲ್ಲೆ, ಹೆಗ್ಡೆ ಗ್ರಾಮ ಪಂಚಾಯಿತಿ ಅಧ್ಯಕ್ಷ, ಮಂಜುನಾಥ ಪಟಿದಾರ್ ಸಂತಸ ವ್ಯಕ್ತಪಡಿಸಿದ್ದಾರೆ.

<><><>

ಮಂಜುನಾಥ ಪಟಿದಾರ ಧ್ವನಿ 33 ಸೆಕೆಂದುಗಳು

<><><>

ಭಾರತದ ಆರ್ಥಿಕ ಉದಾರಿಕರಣದ ಶಿಲ್ಪಿ, ಆಧುನಿಕ ಭಾರತದ ಆರ್ಥಿಕ ಶಕ್ತಿಯ ಅಡಿಪಾಯ ಹಾಕಿದ, ಮಾಜಿ ಪ್ರಧಾನಮಂತ್ರಿ, ಪಿ.ವಿ. ನರಸಿಂಹರಾವ ಅವರ, ಪುಣ್ಯತಿಥಿ ಇಂದು. ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಹಾಗೂ ಹಳಿಯಾಳ ಶಾಸಕ, ಆರ್.ವಿ. ದೇಶಪಾಂಡೆ, ಎಕ್ಸ್ ಮಾಧ್ಯಮದಲ್ಲಿ, ಗೌರವ ನಮನ, ಸಲ್ಲಿಸಿದ್ದಾರೆ.

<><><>

'ನಮ್ಮ ಬೆಂಗಳೂರಿನ', ಸೆಮಿಕಂಡಕ್ಟರ್ ಸ್ಟಾರ್ಟ್‌ಅಪ್, 'ಸೋಫ್ಫೋಸಿನ್', ತನ್ನ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಾಚರಣೆಯನ್ನು, ಉಡುಪಿಗೆ ವಿಸ್ತರಿಸುತ್ತಿದೆ. ಇದು ಬೆಂಗಳೂರಿನ ಆಚೆಗೆ, ಡೀಪ್‌ಟೆಕ್ ಅನ್ನು ಕೊಂಡೊಯ್ಯುವಲ್ಲಿ, ಮಹತ್ವದ ಹೆಜ್ಜೆ ಎಂದು, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಖಾತೆ ಸಚಿವ, ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ.

2 ಮಿಲಿಯನ್ ಡಾಲರ್, ಸೀಡ್ ಫಂಡಿಂಗ್ ಮತ್ತು 1 ದಶಾಂಶ 2 ಮಿಲಿಯನ್ ಡಾಲರ್ ಅನುದಾನದೊಂದಿಗೆ, ಕಂಪೆನಿ, ಮುಂದಿನ ಪೀಳಿಗೆಯ, ಆರೋಗ್ಯ ಸಾಧನಗಳಿಗಾಗಿ, ಮೂಲ ಮಾದರಿ ಸಿಲಿಕಾನ್ ನಿಂದ, ಉತ್ಪಾದನಾ ದರ್ಜೆಯ ಬಯೋ ಸೆನ್ಸಿಂಗ್ ಚಿಪ್‌ಗಳ ಕಡೆ ಸಾಗುತ್ತಿದೆ ಎಂದು, ಎಕ್ಸ್ ಮಾಧ್ಯಮದಲ್ಲಿ, ಹೇಳಿದ್ದಾರೆ.

<><><>

ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆಗಳನ್ನು, ಸೂಪರ್ ಸ್ಪೆ ಾಲಿಟಿ ಆಸ್ಪತ್ರೆಗಳಾಗಿ ಮೇಲ್ದರ್ಜೆಗೇರಿಸುವ, ಚಿಂತನೆ ನಡೆದಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಖಾತೆ ಸಚಿವ, ದಿನೇಶ ಗುಂಡೂರಾವ, ತಿಳಿಸಿದ್ದಾರೆ. ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲೂಕು, ಚಿಕ್ಕಜಾಜೂರು ಸಮೀಪದ, ಗುಂಜಿಗನೂರು ಗೇಟ್ ಬಳಿ, ಸಮುದಾಯ ಆರೋಗ್ಯ ಕೇಂದ್ರದ, ನೂತನ ಕಟ್ಟಡ ಮತ್ತು ವಸತಿ ಗೃಹಗಳನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಗ್ರಾಮೀಣ ಮಟ್ಟದಲ್ಲಿ ಹಾಗೂ ತಾಲೂಕು ಆಸ್ಪತ್ರೆಗಳಲ್ಲಿ, ತಜ್ಞ ವೈದ್ಯ ಸೇವೆಗಳು ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ, ಉನ್ನತ ಮಟ್ಟದ ತಜ್ಞ ವೈದ್ಯ ಸೇವೆಗಳು, ಸೂಪರ್ ಸ್ಪೆ ಾಲಿಟಿ ಸೇವೆಗಳನ್ನು ಜಾರಿಗೆ ತರಲು ಯೋಜಿಸಲಾಗುತ್ತಿದೆ ಎಂದರು.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು, ಇನಾಮ್ ವೀರಾಪೂರ ಗ್ರಾಮದಲ್ಲಿ, ವಿವಾಹಿತ ಗರ್ಭಿಣಿ ಮಗಳನ್ನು, ಅಮಾನು ವಾಗಿ ಹತ್ಯೆಗೈದ ಘಟನೆ, ದುಃಖ ತಂದಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ, ಸಂತೋಷ ಲಾಡ, ಕಂಬನಿ ಮಿಡಿದಿದ್ದಾರೆ. 'ಜಾತಿ ಸುಡೋ ಮಂತ್ರಕಿಡಿ ಪ್ರೀತಿ' ಎಂದು, ರಾಷ್ಟ್ರಕವಿ ಕುವೆಂಪು ಹೇಳಿದ್ದರು. ಈ ಕೃತ್ಯ ಎಸಗಿದವರಿಗೆ, ಕಾನೂನಿನಡಿ ಸೂಕ್ತ ಶಿಕ್ಷೆಯಾಗಲಿದೆ. ಮಾನವೀಯತೆ ಎಲ್ಲಕ್ಕಿಂತ ದೊಡ್ಡದು ಎಂಬುದನ್ನು, ಎಲ್ಲರೂ ಅರಿತುಕೊಳ್ಳಬೇಕು; ಇಂತಹ ಘಟನೆ ಮತ್ತೆಂದೂ ಘಟಿಸದಿರಲಿ ಎಂದು, ಸಚಿವ ಲಾಡ, ಮನವಿ ಮಾಡಿದ್ದಾರೆ.

<><><>

ಮಕ್ಕಳ ಬೆಳವಣಿಗೆಗೆ ಪೂರಕವಾದ ಮನೆ; ಹಳ್ಳಿಗರ ದುಡಿಮೆಗೆ ಸಹಕಾರಿಯಾದ ಮನೆ; ಚಿಣ್ಣರ ಆರೈಕೆಗಾಗಿ ಇರುವ ಮನೆ, ಅದೇ ಬಹು ಆಕ ರ್ಕ "ಕೂಸಿನ ಮನೆ". ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲೂಕಿನ, ಐನೋರ ಹೊಸಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ನಿರ್ಮಾಣವಾದ, ಕೂಸಿನ ಮನೆ, ಗ್ರಾಮದ ಮಕ್ಕಳ ಆಕ ರ್ಣೆಯ ಕೇಂದ್ರವಾಗಿದೆ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ, ಪ್ರಿಯಾಂಕ ಖರ್ಗೆ, ಹರ್ಷ ವ್ಯಕ್ತ ಪಡಿಸಿದ್ದಾರೆ. ಕಲಿಕೆಗೆ ಪೂರಕವಾದ ಗೋಡೆ ಬರೆಹಗಳು, ಮಕ್ಕಳ ಮನಮೋಹಕ ಆಟಿಕೆ ಸಾಮಾನುಗಳು, ಆಕ ರ್ಕ ಕಲಿಕಾ ವಾತಾವರಣ ಲಭ್ಯವಿದ್ದು, ಮಕ್ಕಳು ಪ್ರತಿದಿನ ಸಂತೋ ದಿಂದ ಕೂಸಿನ ಮನೆಗೆ ಆಗಮಿಸುತ್ತಿದ್ದಾರೆ ಎಂದು, ಅವರು ತಿಳಿಸಿದ್ದಾರೆ.

<><><>

2026ರ ಜನೆವರಿ 29 ರಿಂದ 31ರ ವರೆಗೆ, ಮೂರು ದಿನಗಳ, ರಾಯಚೂರು ಉತ್ಸವ ನಡೆಯಲಿದೆ ಎಂದು, ಜಿಲ್ಲಾಧಿಕಾರಿ ಕೆ.ನಿತೀಶ ತಿಳಿಸಿದ್ದಾರೆ. ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜನೋತ್ಸವವಾಗಿ ರಾಯಚೂರು ಉತ್ಸವವನ್ನು ಆಚರಿಸಲು, ಹಲವು ಸಮಿತಿ ಮತ್ತು ಉಪ ಸಮಿತಿಗಳನ್ನು ರಚಿಸಲಾಗಿದೆ, ಎಂದರು.

<><><>

ಬೀದರನಲ್ಲಿ, ಜನೆವರಿ 9 ರಿಂದ 11ರ ವರೆಗೆ, ಬಿದರಿ ಕಲಾ ಉತ್ಸವ ಆಯೋಜಿಸಲಾಗಿದೆ ಎಂದು, ಉತ್ಸವ ಸಮಿತಿ ಅಧ್ಯಕ್ಷೆ, ರೇಖಾ ಅಪ್ಪಾರಾವ್ ಸೌದಿ ತಿಳಿಸಿದ್ದಾರೆ. ಪೂಜ್ಯ, ಶ್ರೀ ಚೆನ್ನಬಸವ ಪಟ್ಟದ್ದೇವರು ರಂಗಮಂದಿರದಲ್ಲಿ, ಬಿದರಿ ಉತ್ಸವ ನಡೆಯಲಿದ್ದು, ಬಿದರಿ ದತ್ತಿ ಪ್ರಶಸ್ತಿಗಳನ್ನು, ಗಣ್ಯರು ಪ್ರದಾನ ಮಾಡಲಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.